ಅ) ಪಾಂಡವಪುರ ತಾಲ್ಲೂಕು ತೊಣ್ಣೂರು ಕೆರೆ ಮತ್ತು ಕುಂತಿ ಬೆಟ್ಟ ಮತ್ತು ಮೇಲುಕೋಟೆ ಈ ಮೂರು ಮುಖ್ಯವಾದ ಪ್ರೇಕ್ಷಣೀಯ ಸ್ಥಳಗಳಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಇವುಗಳನ್ನು ಪ್ರವಾಸೋದ್ಯಮ ಇಲಾಖೆಗೆ ಸೇರ್ಪಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಜೆ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) :

ಅ) ಹೌದು

ಆ) ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಪ್ರವಾಸೋದ್ಯಮ ಸೌಲಭ್ಯಗಳಾದ ಹೋಟೆಲ್, ರೆಸ್ಟೋರೆಂಟ್ಸ್ ಇತ್ಯಾದಿಗಳನ್ನು ಪ್ರವಾಸೋದ್ಯಮ ಕೇಂದ್ರಗಳಲ್ಲಿ ಅಭಿವೃದ್ಧಿ ಪಡಿಸುವ ಬಗ್ಗೆ ಅವಕಾಶ ನೀಡಲಾಗಿದೆ. ಈ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಖಾಸಗಿಯವರು ವಾಣಿಜ್ಯ ದೃಷ್ಟಿಯಿಂದ ಪಾಲ್ಗೊಳ್ಳುವುದಾಗಿ ಸರ್ಕಾರವು ನಿರೀಕ್ಷಿಸುತ್ತದೆ. ಖಾಸಗಿಯವರನ್ನು ಆಕರ್ಷಿಸುವ ಸಲುವಾಗಿ ಸರ್ಕಾರವು ಅನೇಕ ರಿಯಾಯಿತಿ ಉತ್ತೇಜನಗಳನ್ನು ಹೆಚ್ಚಿಸಿದೆ. ಈ ಒಂದು ಕಾರಣಕ್ಕಾಗಿ ಪ್ರವಾಸಿ ಕೇಂದ್ರಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಗಿದ್ದು, ಮೂರು ತಂಡ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು. ಪ್ರವಾಸೋದ್ಯಮ ನೀತಿಯಲ್ಲಿ ಮೇಲುಕೋಟೆಯನ್ನು 'ಸಿ' ಗುಂಪಿನಲ್ಲೂ ಹಾಗೂ ತೊಣ್ಣೂರು ಕೆರೆ ಮತ್ತು ಕುಂತಿಬೆಟ್ಟವನ್ನು 'ಬಿ' ಗುಂಪಿನಲ್ಲೂ ಅಭಿವೃದ್ಧಿಗಾಗಿ ಸೇರಿಸಲಾಗಿದೆ.

ಮೂಲಭೂತ ನಾಗರೀಕ ಸೌಲಭ್ಯಗಳಾದ ರಸ್ತೆ, ನೀರು ಸರಬರಾಜು ಇತ್ಯಾದಿಗಳಿಗಾಗಿ ಸರ್ಕಾರವು ಮಾಸ್ಟರ್ ಪ್ಲಾನ್ ತಯಾರಿಸಿದೆ ಮತ್ತು ಇದನ್ನು ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುವುದು.

ಪಂಚಾಯಿತಿಗಳ ಅಭಿವೃದ್ಧಿಯ ಕಾರ್ಯಕ್ರಮಗಳು

2301 - ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಗ್ರಾಮೀಣ ಅಭಿವೃದ್ಧಿಯ ಬಗ್ಗೆ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ?

ಆ) ಗ್ರಾಮೀಣ ಪ್ರದೇಶಗಳು ಅಭಿವೃದ್ಧಿಯಾಗಲು ಸ್ಥಳೀಯ ಸಂಸ್ಥೆಗಳನ್ನು ಆ ಪಂಚಾಯ್ತಿಯ ಸೊತ್ತು ಎಂದು ಘೋಷಿಸುವ ಉದ್ದೇಶ ಇದೆಯೇ?

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್) :

ಅ) ಯೋಜನೆಗಳ ಪಟ್ಟಿಯನ್ನು ಅನುಬಂಧ-ಎ ನಲ್ಲಿ ಇಡಲಾಗಿದೆ.

ಆ) ಇಲ್ಲಾ

ಇ) ಉದ್ಭವಿಸುವುದಿಲ್ಲ.

ಅನುಬಂಧ - 'ಎ'

ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು

1. ಜವಾಹರ್ ರೋಜ್‌ಗಾರ್ ಯೋಜನೆ
2. ಜವಾಹರ್ ರೋಜ್‌ಗಾರ್ ಯೋಜನೆ ಎರಡನೇ ಮಾಹಿನಿ
3. ದಶಲಕ್ಷಬಾವಿ ಯೋಜನೆ
4. ಇಂದಿರಾ ಅವಾಸ್ ಯೋಜನೆ
5. ಉದ್ಯೋಗ ಭರವಸೆ ಯೋಜನೆ
6. ನೆಮ್ಮದಿ
7. ಬರಪೀಡಿತ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ
8. ಪಶ್ಚಿಮ ಘಟ್ಟ ಅಭಿವೃದ್ಧಿ ಕಾರ್ಯಕ್ರಮ
9. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ
10. ಗ್ರಾಮೀಣ ಯುವಕರಿಗೆ ಸ್ವಯಂ ಉದ್ಯೋಗ ತರಬೇತಿ (ಟ್ರೈಸಂ)
11. ಗ್ರಾಮೀಣ ಕುಶಲಕರ್ಮಿಗಳಿಗೆ ಸುಧಾರಿತ ಉಪಕರಣಗಳ ಪೆಟ್ಟಿಗೆ ಕೊಡುವ ಕಾರ್ಯಕ್ರಮ
12. ಕೃಷಿ ಉತ್ಪನ್ನದ ಹೆಚ್ಚಳಕ್ಕಾಗಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೆರವು ಕಾರ್ಯಕ್ರಮ (100 ಬಾವಿ ಯೋಜನೆ)
13. ಗ್ರಾಮೀಣ ಪ್ರದೇಶದ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ (ಡ್ವಾಕ್ರಾ)
14. ಜೀತವಿಮುಕ್ತರ ಪುನರ್‌ವಸತಿ ಕಾರ್ಯಕ್ರಮ
15. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ
16. ಸಮಗ್ರ ಗ್ರಾಮೀಣ ಇಂಧನ ಕಾರ್ಯಕ್ರಮ
17. ರಾಷ್ಟ್ರೀಯ ಸುಧಾರಿತ ಒಲೆಗಳ ಕಾರ್ಯಕ್ರಮ
18. ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ
    ಅ) ನಲ್ಲಿ ನೀರು ಸರಬರಾಜು ಯೋಜನೆ
    ಆ) ಕಿರು ನೀರು ಸರಬರಾಜು ಯೋಜನೆ
    ಇ) ಕೈಪಂಪು ಅಳವಡಿಸಿದ ಕೊಳವೆ ಬಾವಿ ಯೋಜನೆ
    ಈ) ಗ್ರಾಮ ನೈರ್ಮಲ್ಯ
19. ವಿದೇಶಿ ನೆರವಿನ ಕಾರ್ಯಕ್ರಮಗಳು :
    ಅ) ವಿಶ್ವ ಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲೀಕರಣ ಯೋಜನೆ
    ಆ) ನೆದರ್‌ಲ್ಯಾಂಡ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯದ ಘಟಕ
    ಇ) ಡ್ಯಾನಿಡಾ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲೀಕರಣ ಯೋಜನೆ.